ಸಿ.ಸಿ. ನಂ. 567 /2019 ಪಿಡಬ್ಲ್ಯೂ-7

ಸಾಕ್ಷಿಗೆ ದಿನಾಂಕ 25.8.2022 ರಂದು ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ

ಚಾಸ 1 ರವರಿಂದ ನಾನು ನಾಗರಾಜು ಯಾವ ರೀತಿ ಮೃತಪಟ್ಟಿರುತ್ತಾರೆ ಎಂದು ತಿಳಿದು ಕೊಂಡಿರುತ್ತೇನೆ ಎಂದರೆ ಸರಿ. ಆರೋಪಿ ನನ್ನ ದೊಡ್ಡಪ್ಪನ ಮಗನಿಗೆ ಚಿಕಿತ್ಸೆ ನೀಡಿರುವುದನ್ನು ನಾನು ಖುದ್ದಾಗಿ ನೋಡಿರುವುದಿಲ್ಲ ಎಂದರೆ ಸರಿ. ಆರೋಪಿ ಬಳಿ ಚಿಕಿತ್ಸೆ ಕೊಡಿಸಿದ ಬಗ್ಗೆ ನಾನು ಬೇರೆಯವರಿಂದ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಪರಿಹಾರದ ಸಂಬಂಧ ಆರೋಪಿ ಮನೆಯಲ್ಲಿ ಪಂಚಾಯಿತಿ ಯಾಗಿರುತ್ತದೆ. ಈ ಕೇಸಿನ ಸಂಬಂಧ ನಾನು ಹೇಳಿಕೆ ನೀಡಿರುತ್ತೇನೆ, ಅದರಲ್ಲಿ ಪಂಚಾಯಿತಿಯಲ್ಲಿ ಯಾರು ಯಾರು ಇದ್ದರು ಎಂದು ತಿಳಿಸಿರುತ್ತೇನೆ. ಪಂಚಾಯಿತಿಯ ಬಗ್ಗೆ ಯಾವುದೇ ಬರವಣಿಗೆಯಾಗಿರುವುದಿಲ್ಲ. ನಾನು ಹೇಳಿದಂತೆ ಯಾವುದೇ ಪಂಚಾಯಿತಿಯಾಗಿರುವುದಿಲ್ಲ, ಆರೋಪಿ ಪರಿಹಾರ ನೀಡುತ್ತೇನೆ ಎಂದು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ಸಲ್ಲಿಸಿದ ಸುಳ್ಳು ದೂರಿನ ಪೂರಕವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ದಿನಾಂಕ ನೀವು ಪೋಲಿಸರಿಗೆ ಹೇಳಿಕೆ ನೀಡಿರುತ್ತೀರಿ ಎಂದರೆ ಸಾಕ್ಷಿ ಶವ ಶನಿಖೆ ಮಾಡಿದ ಕಾಲದಲ್ಲಿ ನಾನು ಹೇಳಿಕೆ ನೀಡಿರುತ್ತೇನೆ ಎನ್ನುವರು. ನಾನು ನನ್ನ ಅಣ್ಣನ ಗ್ರಾಮದಲ್ಲಿ ಹೇಳಿಕೆ ನೀಡಿರುತ್ತೇನೆ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ